- ಈ ಸಂಚಿಕೆ ಉತ್ತಮ ಕತೆಗಳನ್ನು ನೀಡಿದೆ. 'ಅಲೆ' (ದೀಪಾ ಫಡ್ಕೆ), 'ಮೂರುಸಾವಿರದ ಮನೆ' (ಉಷಾ ಸಿಂಹನ್), 'ಸದ್ಗತಿ' (ಪ್ರೇಮಚಂದ್) ಕತೆಗಳಲ್ಲಿನ ಭಾಷಾಪ್ರೌಢಿಮೆ, ನಿರೂಪಣೆ, ಕಥಾವಸ್ತುಗಳು ಓದುಗರ ಮನೋಭಿತ್ತಿಯಲ್ಲಿ ಉಳಿಯುತ್ತವೆ.

**ಎಸ್. ಪ್ರಭಾ, ಬೆಂಗಳೂರು**

- 'ಮಾತು–ಕತೆ'ಯಲ್ಲಿ ಕನ್ನಡದ ಪ್ರಖರ ವಿಚಾರವಾದಿ ಜಿ. ರಾಜಶೇಖರ್ ಅವರ ಮಾತುಗಳಲ್ಲಿ ಸತ್ಯವಿದೆ. ಅವರ ವಿಚಾರಗಳು ಇಂದಿನ ಯುವಲೇಖಕರ ಕಣ್ಣು ತೆರೆಸುವಂತಿವೆ.

**ಹುರಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**

- ಈ ಸಂಚಿಕೆಯ 'ನಾಂದಿಪದ' ಮನಸ್ಸನ್ನು ಹೊಸ ಚಿಂತನೆಗೆ ಹಚ್ಚಿತು. ಸಂಚಿಕೆಯ ಒಳಹೂರಣವನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಈ ಬರಹ ಮುಂದಿನ ಓದಿಗೆ ಹುರುಪು ತುಂಬುತ್ತದೆ.

**ಆರ್.ಎಸ್. ಕಲ್ಮಠ, ಇಳಕಲ್ಲ**

- 'ನವಿಲುಗರಿ'ಯಲ್ಲಿ ಎರಡು ಭಾಗಗಳಲ್ಲಿ ಪ್ರಕಟವಾದ ಶಾ. ಬಾಲುರಾವ್ ಅವರ ಕತೆ 'ಚೀಫ್‌ಗೈಡ್ ಸೂರಿಯ ಪ್ರಣಯ ವೃತ್ತಾಂತ' ಸೊಗಸಾಗಿದೆ. ಪ್ರೇಮ ಒಂದು




ಬಹುಮುಖಿ ವಜ್ರ ಎನ್ನುವುದನ್ನು ಕತೆ ಮಾರ್ಮಿಕವಾಗಿ ತಿಳಿಸುತ್ತದೆ.

**ಮೋಹನ ಹಣಗಿ, ಅಮೀನಗಡ**

- 'ಬೇಂದ್ರೆ ಬೆಳಗು' (ಜಿ. ಕೃಷ್ಣಪ್ಪ) ಲೇಖನ ಉತ್ತಮವಾಗಿದೆ. 100 ವರ್ಷ ತುಂಬಿದ ಚಿರನೂತನ ಕವನದ ಬಗ್ಗೆ ಓದಿ ಖುಷಿಯಾಯಿತು.

**ಕೆ.ಎಸ್. ರಾಜಶೇಖರ, ವಿಜಯಪುರ**

- ಇಂದಿರಾ ಪಾರ್ಥಸಾರಥಿ ಅವರ ಕತೆ (ಅನುವಾದ: ಕೆ. ನಲ್ಲತಂಬಿ) 'ಒಂದು ಕಪ್ ಕಾಫಿ' ಮನುಷ್ಯನ ಜೀವನದ ಅಂತಿಮ ಸತ್ಯವನ್ನು ಶೋಧಿಸುತ್ತದೆ.

**ಜಗದೀಶ ಹಿರೇಮಠ, ಬಾಗಲಕೋಟೆ**

- ಸೆಪ್ಟೆಂಬರ್ ಸಂಚಿಕೆಯ 'ಸ್ಮೃತಿಬಿಂಬ' ಅಂಕಣದಲ್ಲಿ ಪ್ರಕಟವಾದ ಚಿತ್ರ 'ಪಲ್ಲವಿ' ಸಿನಿಮಾದ ಸ್ಥಿರಚಿತ್ರ ಅಲ್ಲ, ಅದು 'ಅನುರೂಪ' ಸಿನಿಮಾದ್ದು. ಈ ಚಿತ್ರವನ್ನು 1976ರಲ್ಲಿ ಸ್ಥಿರ ಛಾಯಾಗ್ರಾಹಕ ಕೆ.ಜಿ. ಶಿವಯೋಗಿ ತೆಗೆದಿದ್ದರು. ನಿರ್ದೇಶಕ ಪಿ. ಲಂಕೇಶ್, ಛಾಯಾಗ್ರಾಹಕ ಬಿ.ಸಿ. ಗೌರಿಶಂಕರ್, ಸಹ ನಿರ್ದೇಶಕ ಆರ್. ನಾಗೇಶ್, ಮೇಕಪ್ ಮ್ಯಾನ್ ಮಲ್ಲೇಶ್ ಹರ್ತಿ ಮತ್ತು ಸಹ ನಿರ್ದೇಶಕನಾಗಿ ಕೆಲಸ ಮಾಡಿದ ನಾನು ಇದ್ದೇವೆ. ಈ 43 ವರ್ಷಗಳಲ್ಲಿ ಈ ಚಿತ್ರದಲ್ಲಿದ್ದ ಎಲ್ಲರೂ ತೀರಿಕೊಂಡಿದ್ದಾರೆ. ಉಳಿದಿರುವುದು ನಾನೊಬ್ಬ. ಈ ಸಿನಿಮಾದಲ್ಲಿ ನಟಿಸಿದ ಅನಂತನಾಗ್, ಟಿ.ಎನ್. ಸೀತಾರಾಂ, ಅಗ್ನಿ ಶ್ರೀಧರ್ ನಮ್ಮ ನಡುವೆ ಇದ್ದಾರೆ.

**ಕೃಷ್ಣ ಮಾಸಡಿ, ಬೆಂಗಳೂರು**